# ಕರ್ನಾಟಕ ಸರ್ಕಾರ

ಸಂ: ಡಿ.ವೈ.ಇ.ಎಸ್/ಕ್ರೀ.ಚ.ಪ್ರೋ/71/2023-24

ಆಯುಕ್ತರ ಕಾರ್ಯಾಲಯ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ,
ಬೆಂಗಳೂರು-01, ದಿನಾಂಕ:24-11-2023.

## <u>ಸುತ್ತೋಲೆ</u>

ವಿಷಯ: 2022ನೇ ಸಾಲಿನ ಏಕಲವ್ಯ ಪ್ರಶಸ್ತಿಗಳಿಗಾಗಿ ಪರಿಷ್ಕೃತ ಸರ್ಕಾರಿ ಆದೇಶದಂತೆ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕವನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:26-10-2023.
2) ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/170/2022 ಬೆಂಗಳೂರು, ದಿನಾಂಕ: 07.11.2023.

******

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಅದರಂತೆ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಪ್ರತಿಭಾನ್ವಿತ ಕ್ರೀಡಾಪಟುಗಳಿಂದ ಸರ್ಕಾರಿ ಆದೇಶ ಸಂಖ್ಯೆ : ಯುಸೇಇ 312 ಯುಸೇಕ್ರೀ 2014 ದಿನಾಂಕ: 22-07-2014 ರ ಆದೇಶದನ್ವಯ ಉಲ್ಲೇಖ (1)ರಂತೆ 2022 ನೇ ಸಾಲಿನ ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಏಕಲವ್ಯ ಪ್ರಶಸ್ತಿಯ ಮಾರ್ಗಸೂಚಿಗಳ ಪರಿಷ್ಕರಣೆಯು ಸರ್ಕಾರಿ ಉಲ್ಲೇಖ (2)ರ ಆದೇಶ ಸಂಖ್ಯೆ: ವೈಎಸ್ ಡಿ-ಸಿಡಿಎನ್/170/2022 ಬೆಂಗಳೂರು ದಿನಾಂಕ:07.11.2023ರಲ್ಲಿ ಆದೇಶವಾಗಿರುತ್ತದೆ. (ಸರ್ಕಾರಿ ಆದೇಶವನ್ನು ಲಗತ್ತಿಸಿದೆ)

ಮೇಲಿನ ಹೊಸ ಆದೇಶದನ್ವಯ 2022ನೇ ಸಾಲಿನ ಏಕಲವ್ಯ ಪ್ರಶಸ್ತಿಗಾಗಿ ಅರ್ಹ ಕ್ರೀಡಾಪಟುಗಳಿಂದ ಮರು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸುವ ದಿನಾಂಕವನ್ನು ಮುಂದುವರೆಸಿ, ದಿನಾಂಕ:08-12-2023ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸುವುದು.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,

1. ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು.
2. ಎಲ್ಲಾ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
3. ರಾಜ್ಯದ ಎಲ್ಲಾ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳು.
4. ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ
## 2022ನೇ ಸಾಲಿನ ಏಕಲವ್ಯ ಪ್ರಶಸ್ತಿಯ ಅರ್ಜಿ ನಮೂನೆ

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

| | |
|---|---|
| 1. | ಕ್ರೀಡಾಪಟುವಿನ ಹೆಸರು : |
| 2. | ತಂದೆಯ ಹೆಸರು : |
| 3. | ಪುರುಷ/ಮಹಿಳೆ : |
| 4. | ಹುಟ್ಟಿದ ದಿನಾಂಕ : |
| 5. | ಸಾಧನೆ ಮಾಡಿದ ಕ್ರೀಡೆಯ ಹೆಸರು<br>(ಅನುಬಂಧ-1 ಅನ್ನು ಗಮನಿಸುವುದು) : |
| 6. | ವಿಳಾಸ<br>(ಅ) ಖಾಯಂ ವಿಳಾಸ |
| | (ಬ) ಪ್ರಸ್ತುತ ವಿಳಾಸ |
| 7. | ದೂರವಾಣಿ ಸಂಖ್ಯೆ :<br>(ಅ) ಕಚೇರಿ<br>(ಬ) ಮನೆ |
| 8. | ನೀವು ಉದ್ಯೋಗಸ್ಥರಾಗಿದ್ದರೆ<br>ಉದ್ಯೋಗದ ಹೆಸರು ಮತ್ತು ವಿಳಾಸ :<br>ನೀವು ವಿದ್ಯಾರ್ಥಿಯಾಗಿದ್ದಲ್ಲಿ<br>ಕಾಲೇಜಿನ ಪೂರ್ಣ ವಿಳಾಸ : |
| 9. | ವಿದ್ಯಾರ್ಹತೆ : |
| 10. | ನೀವು ಯಾವುದೇ ರಾಜ್ಯದ/ ರಾಷ್ಟ್ರ<br>ಪ್ರಶಸ್ತಿಯನ್ನು ಪಡೆದಿದ್ದರೆ ಅದರ<br>ಪೂರ್ಣ ವಿವರ: |
| 11. | ನೀವು ಸಾಧನೆ ಮಾಡಿದ ಕ್ರೀಡೆಯ :<br>ಭಾವಚಿತ್ರ ಹಾಗೂ ಸರ್ಟಿಫಿಕೇಟ್‌ನ್ನು<br>ಲಗತ್ತಿಸುವುದು. |
| 12 | ಆಧಾರ್ ಕಾರ್ಡ್ ಪ್ರತಿ : |
| 13 | ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ಬಗ್ಗೆ<br>ಪೊಲೀಸ್ ಪರಿಶೀಲನಾ ಪತ್ರ ಕಡ್ಡಾಯವಾಗಿ ಸಲ್ಲಿಸುವುದು : |

ಮೇಲೆ ನೀಡಿರುವ ಎಲ್ಲಾ ಮಾಹಿತಿ ಸತ್ಯವಾಗಿದೆಯೆಂದು ಮತ್ತು ಒದಗಿಸಿರುವ ಎಲ್ಲಾ ದಾಖಲೆಗಳು ಮೂಲ ದಾಖಲೆಗಳ ನೈಜ ಪ್ರತಿಗಳೆಂದು ಪ್ರಮಾಣೀಕರಿಸುತ್ತೇನೆ.

ಸಹಿ:

ಹೆಸರು:

ವಿಳಾಸ:

**01-01-2018 ರಿಂದ 31-12-2022 ರವರೆಗೆ ಕ್ರೀಡಾ ಸಾಧನೆಯ ಬಗ್ಗೆ ಪೂರ್ಣ ವಿವರ (ದೃಢೀಕರಿಸಿದ ಪ್ರಮಾಣಪತ್ರ ಲಗತ್ತಿಸುವುದು)**

**ರಾಷ್ಟ್ರ ಮಟ್ಟ (ಕರ್ನಾಟಕವನ್ನು ಪ್ರತಿನಿಧಿಸಿದ್ದರೆ ಮಾತ್ರ)**

| ಭಾವಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಭಾಗವಹಿಸುವಿಕೆ/ ಪದಕ | ಷರಾ |
|---|---|---|---|---|
| 2018 | | | | |
| 2019 | | | | |
| 2020 | | | | |
| 2021 | | | | |
| 2022 | | | | |

**ಅಂತರರಾಷ್ಟ್ರೀಯ ಮಟ್ಟ:**

| ಭಾವಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಭಾಗವಹಿಸುವಿಕೆ/ ಪದಕ | ಷರಾ |
|---|---|---|---|---|
| 2018 | | | | |
| 2019 | | | | |
| 2020 | | | | |
| 2021 | | | | |
| 2022 | | | | |

## ಸ್ವಯಂ ಮೌಲ್ಯಮಾಪನ

| ಭಾವಗವಹಿಸಿದ ವರ್ಷ | ಕ್ರೀಡಾಕೂಟ ನಡೆದ ಸ್ಥಳ | ಕ್ರೀಡಾಕೂಟ ನಡೆದ ದಿನಾಂಕ | ಸಾಧನೆಯ ವಿವರ | ಅಂಕದ ಪಟ್ಟಿಯ ಪ್ರಕಾರ ದೊರೆಯುವ ಅಂಕ |
|---|---|---|---|---|
| | | | | |
| | | | | |
| | | | | |
| ಒಟ್ಟು ಅಂಕ | | | | |

## ದೃಢೀಕರಣ

ನಾನು_____________________ಕೊಟ್ಟಿರುವ ಮಾಹಿತಿಗಳು ಪೂರ್ಣವಾಗಿ ಸತ್ಯವಾದುದೆಂದು ದೃಢೀಕರಿಸುತ್ತೇನೆ.

ಕ್ರೀಡಾಪಟುವಿನ ಸಹಿ:
ಹೆಸರು:

ಸ್ಥಳ:
ದಿನಾಂಕ:

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** "ಏಕಲವ್ಯ ಪ್ರಶಸ್ತಿ" ನೀಡುವ ಕುರಿತು ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 188 ಯುಸೇಕ್ರೀ 2012 ; ದಿನಾಂಕ: 16/07/2012.
2. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 146 ಯುಸೇಕ್ರೀ 2013; ದಿನಾಂಕ: 01/08/2013.
3. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 312 ಯುಸೇಕ್ರೀ 2014; ದಿನಾಂಕ:22/07/2014.
4. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 381 ಯುಸೇಕ್ರೀ 2015; ದಿನಾಂಕ:24/08/2015.
5. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್ /ಕ್ರೀಚಪ್ರೊ/166/2022-23; ದಿನಾಂಕ:03.08.2023.

*****

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ಅಪ್ರತಿಮ ಕ್ರೀಡಾ ಸಾಧಕರಿಗೆ ಪ್ರತಿ ವರ್ಷ ನೀಡಲಾಗುತ್ತಿರುವ ಏಕಲವ್ಯ ಪ್ರಶಸ್ತಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ:(1) ರಿಂದ ( 4)ರ ವರೆಗಿನ ಆದೇಶಗಳ ಮೂಲಕ ರಚಿಸಲಾದ ಮಾರ್ಗಸೂಚಿಗಳನ್ನು ಏಕಲವ್ಯ ಪ್ರಶಸ್ತಿಗಾಗಿ ಅರ್ಹತಾ ಮಾನದಂಡವಾಗಿ ಅನುಸರಿಸಲಾಗುತ್ತಿದೆ.

ಬದಲಾದ ಕಾಲಮಾನಕ್ಕೆ ತಕ್ಕಂತೆ ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ಪ್ರಸ್ತುತ ಆರ್ಥಿಕ ಸ್ಥಿತಿಗತಿ ರಾಜ್ಯದ ಕ್ರೀಡಾ ಸಾಧನೆಯ ಬೆಳವಣಿಗೆ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ಮೇಲೆ(5)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸಂಖ್ಯೆ 1843
13/11/2023

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/170/2022**
**ಬೆಂಗಳೂರು, ದಿನಾಂಕ:07.11.2023.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಕ್ರೀಡಾ ಕ್ಷೇತ್ರದ ಅಪ್ರತಿಮ ಸಾಧಕರಿಗೆ ನೀಡುವ ಸಂಬಂಧ ಮೇಲೆ (1)ರಿಂದ (4)ರಲ್ಲಿ ಓದಲಾದ ಆದೇಶಗಳಲ್ಲಿ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ರದ್ದುಪಡಿಸಿ, ಈ ಆದೇಶದ ಅನುಬಂಧ-1ರಲ್ಲಿರುವಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಪುನರ್ ರಚಿಸಿ ಆದೇಶಿಸಲಾಗಿದೆ.

-2

ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ವಿವರಗಳನ್ನು ಅನುಬಂಧ-2ರಲ್ಲಿ ಹಾಗೂ ಪ್ರತಿ ಕ್ರೀಡಾ ಸಾಧನೆಯ ಅಂಕಪಟ್ಟಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಜಯಶ್ರೀ ಎಸ್.ಎನ್)**
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ)/(ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಆಯುಕ್ತರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಎಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ-(ಆಯುಕ್ತರು,ಯುಸಕ್ರೀ ಮೂಲಕ).
4. ಉಪ ನಿರ್ದೇಶಕರು, ಟಿಎನ್ ಎಂಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/170/2022;**
**ದಿನಾಂಕ:07.11.2023ರ ಅನುಬಂಧ-1**
**ಏಕಲವ್ಯ ಪ್ರಶಸ್ತಿಯ ಪರಿಷ್ಕೃತ ಮಾರ್ಗಸೂಚಿಗಳು-2023**

1. ಈ ನಿಯಮಾವಳಿಗಳು ತಕ್ಷಣದಿಂದ ಜಾರಿಗೆ ಬರುತ್ತದೆ.

2. ಪರಿಭಾಷೆಗಳು:- ಈ ನಿಯಮಾವಳಿಗಳಲ್ಲಿ ಸಂದರ್ಭ ಅನ್ಯತಾ ಅಗತ್ಯ ಪಡಿಸಿದ ಹೊರತು.
   - ಕ್ರೀಡೆ :- ಕ್ರೀಡೆ ಅಂದರೆ ಅನುಬಂಧ-2 ರಲ್ಲಿ ಕಾಣಿಸಿರುವ ಕ್ರೀಡೆಗಳು
   - ಸರ್ಕಾರ :- ಸರ್ಕಾರ ಅಂದರೆ ಕರ್ನಾಟಕ ಸರ್ಕಾರ
   - ವರ್ಷ :- ಕ್ಯಾಲೆಂಡರ್ ವರ್ಷ(ಜನವರಿ 1 ರಿಂದ ಡಿಸೆಂಬರ್ 31 ರ ವರೆಗೆ)

3. ಉದ್ದೇಶ: ರಾಜ್ಯದಲ್ಲಿ ಕ್ರೀಡೆಯ ಅಭಿವೃದ್ಧಿಗಾಗಿ ಹಾಗೂ ಆಯಾ ಗುಂಪು ಕ್ರೀಡೆಗಳಲ್ಲಿ ಮತ್ತು ವೈಯಕ್ತಿಕ ಕ್ರೀಡೆಗಳಲ್ಲಿ ಸಾಧಿಸಿದ ಅತ್ಯುನ್ನತ ಸಾಧನೆಗಳನ್ನು ಗುರುತಿಸಿ ಗೌರವಿಸಿ ಪ್ರೋತ್ಸಾಹಿಸುವುದು.

4. ಅರ್ಜಿ ಸ್ವೀಕಾರ:- ಏಕಲವ್ಯ ಪ್ರಶಸ್ತಿಗೆ ನೇರವಾಗಿ / ಕೆಳಕಾಣಿಸಿದ ಇಲಾಖೆ, ಸಂಘ ಸಂಸ್ಥೆಗಳ ಮೂಲಕ ಸ್ವೀಕರಿಸಲಾಗುವುದು.
   I. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
   II. ಕರ್ನಾಟಕ ಕ್ರೀಡಾ ಪ್ರಾಧಿಕಾರ
   III. ವಿಶ್ವವಿದ್ಯಾನಿಲಯಗಳು
   IV. ಭಾರತದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಮಾನ್ಯತೆ ನೀಡಿದ ಕ್ರೀಡಾ ಸಂಘ ಸಂಸ್ಥೆಗಳು ಅರ್ಹ ಕ್ರೀಡಾಪಟುಗಳ ಹೆಸರುಗಳನ್ನು ಅಗತ್ಯ ದಾಖಲೆಗಳೊಂದಿಗೆ ಶಿಫಾರಸ್ಸು ಮಾಡಬಹುದು.

5. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ **ಆನ್ ಲೈನ್ (Online)/ ನೊಂದಣಿ ಅಂಚೆ/ ಖುದ್ದಾಗಿ ಸರ್ಕಾರಿ ರಜಾದಿನಗಳನ್ನು ಹೊರತು ಪಡಿಸಿ ಕಛೇರಿಯ ವೇಳೆಯಲ್ಲಿ** ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

6. ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

7. ಪ್ರಶಸ್ತಿ ನೀಡುವ ವರ್ಷ ಸೇರಿದಂತೆ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳ **ನಕಲು ಪ್ರತಿಯನ್ನು ಕ್ರೀಡಾಪಟುಗಳು ಸ್ವಯಂ ದೃಢೀಕರಿಸಿ** ಸಲ್ಲಿಸತಕ್ಕದ್ದು.

8. **ಅರ್ಜಿ ನಮೂನೆಯೊಂದಿಗೆ ನೀಡಿರುವ ಅನುಬಂಧ-02ರಲ್ಲಿರುವ ಅಂಕಪಟ್ಟಿಯಂತೆ ಸ್ವಯಂ ಮೌಲ್ಯಮಾಪನ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅದರಲ್ಲಿ ಹೆಚ್ಚು ಅಂಕ ಪಡೆಯುವ ಗರಿಷ್ಠ 3 ಸಾಧನೆಗಳನ್ನು ಮಾತ್ರ ಪರಿಗಣಿಸಲಾಗುವುದು.**

9. ಆಯ್ಕೆಯ ನಿಯಮ: ಈ ಪ್ರಶಸ್ತಿ ನೀಡಲು ಆಯ್ಕೆ ಸಮಿತಿಯು ಕ್ರೀಡಾಪಟುಗಳು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿ ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

10. ನಿಯಮ 5 ರಲ್ಲಿ ತಿಳಿಸಿರುವಂತೆ ಪ್ರಶಸ್ತಿಗಾಗಿ ಸಲ್ಲಿಸಲಾದ ಅರ್ಜಿಗಳಿಗೆ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರವು ಈ ಏಕಲವ್ಯ ಪ್ರಶಸ್ತಿಯನ್ನು ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆ

ಮಾಡಿರುವ ಕ್ರೀಡಾಪಟುಗಳಿಗೆ ನೀಡತಕ್ಕದ್ದು. ಸರ್ಕಾರದ ತೀರ್ಮಾನವೇ ಅಂತಿಮವಾದದ್ದು. ಈ ಆಯ್ಕೆ ನಿಯಮಗಳ ಅರ್ಥೈಸುವಿಕೆ ಸಂಬಂಧಿಸಿದಂತೆ ಸರ್ಕಾರದ ನಿರ್ಣಯವೇ ಅಂತಿಮ.

11. ಅರ್ಹತೆ:

I. ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದಿಂದ ಕಳೆದ 5 ವರ್ಷಗಳ ಕ್ರೀಡಾ ಸಾಧನೆಗಳನ್ನು ಪರಿಗಣಿಸಲಾಗುವುದು.

II. ಭಾರತದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಮಾನ್ಯತೆ ಪಡೆದ ಕ್ರೀಡಾ ಸಂಘ ಸಂಸ್ಥೆಗಳು ಆಯೋಜಿಸಿರುವ ಕ್ರೀಡಾಕೂಟಗಳು ಹಾಗೂ ಅದೇ ಸಂಸ್ಥೆಗಳು ನೀಡುವ ಪ್ರಮಾಣಪತ್ರ/ಅರ್ಹತಾ ಪ್ರಮಾಣ ಪತ್ರ ನೀಡಿದ್ದಲ್ಲಿ ಅವುಗಳನ್ನು ಮಾತ್ರ ಪರಿಗಣಿಸಲಾಗುವುದು.

III.ಕರ್ನಾಟಕದ ನಿವಾಸಿಯಾಗಿದ್ದು, ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು.ಇಂತಹ ಸಂದರ್ಭದಲ್ಲಿ ಕನಿಷ್ಠ ಒಂದು ವರ್ಷ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿರಲೇಬೇಕು ಹಾಗೂಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದಲ್ಲಿ ವಿದೇಶ ಪ್ರಯಾಣ ರಹದಾರಿ ಪತ್ರ (Passport Copy) ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

IV. ಭಾರತದ ಪ್ರಜೆಯಾಗಿದ್ದು, ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ 5 ವರ್ಷ ಕರ್ನಾಟಕವನ್ನು ಪ್ರತಿನಿಧಿಸಿರಬೇಕು ಮತ್ತು ಕರ್ನಾಟಕದ ನಿವಾಸಿಯಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

V.ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಕರ್ನಾಟಕದಿಂದ ಯಾವುದೇ ಕ್ರೀಡಾ ತಂಡ ಅಥವಾ ರಾಜ್ಯ ಕ್ರೀಡಾ ಸಂಸ್ಥೆಗಳು ಇಲ್ಲದಿದ್ದಲ್ಲಿ, ಒಂದು ವರ್ಷ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿರಬೇಕು ಎಂಬ ಷರತ್ತು ಅನ್ವಯಿಸುವುದಿಲ್ಲ. ಆದರೆ ಕರ್ನಾಟಕದ ನಿವಾಸಿಯಾಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

VI. ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ಬಗ್ಗೆ ಪೊಲೀಸ್ ಪರಿಶೀಲನಾ ಪತ್ರ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

12. ಪ್ರಶಸ್ತಿ:- ಏಕಲವ್ಯ ಪ್ರಶಸ್ತಿಯು ಏಕಲವ್ಯನ ಕಂಚಿನ ಪ್ರತಿಮೆ, ಪ್ರಮಾಣ ಪತ್ರ, ಶಾಲು, (ಪುರುಷರಿಗೆ ಪ್ಯಾಂಟು, ಶರ್ಟು, ಟೈ ಬ್ಲೇಜರ್, ಶೂ ಮತ್ತು ಮಹಿಳೆಯರಿಗೆ ಮೈಸೂರು ಸಿಲ್ಕ್ ಸೀರೆ, ಬ್ಲೇಜರ್, ಚಪ್ಪಲ್, ಸ್ಟೋಲ್ ಹಾಗೂ ನಗದು ಬಹುಮಾನ- ರೂ. 4,00,000/- ಗಳನ್ನು ಒಳಗೊಂಡಿರುತ್ತದೆ.

13. ಕ್ರೀಡಾಪಟು ಅರ್ಜಿ ಸಲ್ಲಿಸಿದ ನಂತರ ಮರಣ ಹೊಂದಿದಲ್ಲಿ ಆ ಕ್ರೀಡಾಪಟು ಪ್ರಶಸ್ತಿಗೆ ಅರ್ಹರಾಗಿದ್ದಲ್ಲಿ ಮರಣೋತ್ತರ ಪ್ರಶಸ್ತಿಗೆ ಪರಿಗಣಿಸಲಾಗುವುದು.

14. ಅನರ್ಹತೆ:

I. ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿಯನ್ನು ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸುವುದರ ಜೊತೆಗೆ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಆಜೀವ ನಿಷೇಧ ಹೇರಲಾಗುವುದು ಮತ್ತು ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

II. ಈ ಹಿಂದೆ ಈಗಾಗಲೇ ಈ ಪ್ರಶಸ್ತಿಯನ್ನು ಪಡೆದವರು ಅರ್ಹರಿರುವುದಿಲ್ಲ.

15. ಪ್ರಶಸ್ತಿಯನ್ನು ರದ್ದುಗೊಳಿಸುವುದು:-

ಸರ್ಕಾರವು ನೀಡಲಾದ ಏಕಲವ್ಯ ಪ್ರಶಸ್ತಿಯನ್ನು ಈ ಕೆಳಕಂಡ ಕಾರಣಗಳಿಗಾಗಿ ರದ್ದುಗೊಳಿಸಬಹುದಾಗಿರುತ್ತದೆ.

1. ಸುಳ್ಳು (ನಕಲಿ) ಪ್ರಮಾಣ ಪತ್ರ ಸಲ್ಲಿಸಿರುವುದು ದೃಢಪಟ್ಟಲ್ಲಿ.

2. ಪ್ರಶಸ್ತಿ ನೀಡಿದ ನಂತರದಲ್ಲಿ ಯಾವುದೇ ಮೂಲಗಳಿಂದ ಮಾಹಿತಿ ದೊರಕಿ ವಿಚಾರಣೆ/ತನಿಖೆಗೆ ಒಳಪಟ್ಟು ಸಲ್ಲಿಸಿದ ದಾಖಲೆಗಳು ತಪ್ಪೆಂದು ತಿಳಿದುಬಂದಲ್ಲಿ ಪ್ರಶಸ್ತಿಯನ್ನು ಹಿಂದಕ್ಕೆ ಪಡೆಯಲಾಗುವುದು ಹಾಗೂ ಅಂತಹ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

16. ನಿಯಮಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು:- ನಿಯಮಗಳನ್ನು ತಪ್ಪಾಗಿ ತಿಳಿದುಕೊಂಡಿದ್ದಲ್ಲಿ, ಈ ಸಂದರ್ಭದಲ್ಲಿ ಸರ್ಕಾರವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ.
17. ಪ್ರಶಸ್ತಿಯನ್ನು ಅಂಗೀಕರಿಸುವ ಬಗ್ಗೆ:- ಏಕಲವ್ಯ ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾಪಟುಗಳು ಈ ಪ್ರಶಸ್ತಿಯ ನೀತಿ ನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.
18. ಪ್ರಶಸ್ತಿಯ ಸಂಖ್ಯೆ:- ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಪುರುಷ ಹಾಗೂ ಮಹಿಳೆಯರು ಮತ್ತು ಇಬ್ಬರು ಭಿನ್ನ ಸಾಮರ್ಥ್ಯದ ಕ್ರೀಡಾಪಟು ಸೇರಿದಂತೆ 15 ಕ್ರೀಡಾಪಟುಗಳಿಗೆ ಪ್ರಶಸ್ತಿಯನ್ನು ನೀಡಲಾಗುವುದು. ಸಂಖ್ಯಾ ಮಿತಿ ನಿರ್ಧರಿಸುವುದು ಸರ್ಕಾರದ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.
19. ಕ್ರೀಡಾಪಟುಗಳ ಆಯ್ಕೆಗೆ ಅನುಬಂಧ-2ರಲ್ಲಿ ನೀಡಿರುವ ಕ್ರೀಡೆಗಳಲ್ಲಿನ ಸಾಧನೆಯನ್ನು ಆಧರಿಸಿ ಮೌಲ್ಯಮಾಪನ ಮಾಡತಕ್ಕದ್ದು.
20. ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಕಾಲಕಾಲಕ್ಕೆ ಕ್ರೀಡಾ ಸಂಸ್ಥೆಗಳಿಗೆ ನೀಡುವ ಮಾನ್ಯತೆಗಳನ್ನು ಆಯ್ಕೆ ಸಮಯದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದು. ಕ್ರೀಡಾ ಸಂಸ್ಥೆಗಳ ಮಾನ್ಯತೆ ಬಗ್ಗೆ ವಿವಾದಗಳಿದ್ದಲ್ಲಿ, ಕ್ರಿಡಾಪಟುವಿಗೆ ಪ್ರಶಸ್ತಿ ನೀಡುವ ಬಗ್ಗೆ ಸರ್ಕಾರದ ನಿರ್ಣಯವೇ ಅಂತಿಮ.
21. ಏಕಲವ್ಯ ಪ್ರಶಸ್ತಿಗಾಗಿ ಸಲ್ಲಿಸಿರುವ ಎಲ್ಲಾ ದಾಖಲೆಗಳ ಮೇಲೆ ಅರ್ಜಿ ಸಲ್ಲಿಸುತ್ತಿರುವ ಕ್ರೀಡಾಪಟು ಸ್ವತಃ ಕಡ್ಡಾಯವಾಗಿ ಸಹಿ ಮಾಡಿ ಧೃಢೀಕರಿಸತಕ್ಕದ್ದು. ಅರ್ಜಿಯ ಪ್ರತಿಯೊಂದು ಪುಟಕ್ಕೆ ಪುಟ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.ಸ್ವಯಂ ಧೃಢೀಕರಣವಿಲ್ಲದ ಅರ್ಜಿ ಮತ್ತು ದಾಖಲೆಗಳನ್ನು ತಿರಸ್ಕರಿಸಲಾಗುವುದು.
22. **i)** 5 ಕ್ಯಾಲೆಂಡರ್ ವರ್ಷಗಳಲ್ಲಿನ ಕ್ರೀಡಾ ಸ್ಪರ್ಧೆಗಳಲ್ಲಿ ಮೂರು ಅತ್ಯುತ್ತಮ ಮತ್ತು ಹೆಚ್ಚಿನ ಸಾಧನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
    ii) ಅನುಬಂಧ-3ರಲ್ಲಿ ಒದಗಿಸಿರುವ ಅಂಕಪಟ್ಟಿಯಂತೆ ಪ್ರತಿ ಕ್ರೀಡಾ ಸಾಧನೆಗೆ ಅಂಕಗಳನ್ನು ನಿಗಧಿಪಡಿಸುವುದು.
23. ಸಂಬಂಧಪಟ್ಟ ಕ್ರೀಡೆಗಳಲ್ಲಿ ಕ್ರೀಡಾಪಟುಗಳು ಸಮಾನ ಅಂಕಗಳನ್ನು ಪಡೆದಿದ್ದಲ್ಲಿಆಯಾ ಅಭ್ಯರ್ಥಿಗಳ 4ನೇ ಅತ್ಯುತ್ತಮ ಸಾಧನೆಯ ಜೇಷ್ಠತೆಯನ್ನು ನಿರ್ಧರಿಸಲಾಗುವುದು.
24. ಪ್ರಸಕ್ತ ವರ್ಷ ಏಕಲವ್ಯ ಪ್ರಶಸ್ತಿ ನೀಡುವಾಗ ಹಿಂದಿನ ವರ್ಷಗಳಲ್ಲಿ ಏಕಲವ್ಯ ಪ್ರಶಸ್ತಿ ನೀಡಿರುವ ಕ್ರೀಡೆಗಳಿಗೆ ಹೆಚ್ಚು ಒತ್ತು ಕೊಡದಿರಲು ಆಯ್ಕೆ ಸಮಿತಿ ಕ್ರಮವಹಿಸತಕ್ಕದ್ದು.
25. ಮಾರ್ಗಸೂಚಿಗಳಲ್ಲಿನ ಯಾವುದಾದರೂ ಕಲಂಗೆ ತಿದ್ದುಪಡಿ ಮಾಡಬೇಕಾದಲ್ಲಿ, ಆಯ್ಕೆ ಸಮಿತಿಯ ಅನುಮೋದನೆಯೊಂದಿಗೆ ಅದನ್ನು ಸಭಾ ನಡವಳಿಯಲ್ಲಿ ದಾಖಲಿಸಿ ಮಾರ್ಪಾಡು ಮಾಡುವ ಅಧಿಕಾರ ಆಯ್ಕೆ ಸಮಿತಿಗೆ ಇರುತ್ತದೆ.
26. ಪರಿಶೀಲನಾ ಸಮಿತಿ:-

1. ಏಕಲವ್ಯ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಲು ಸರ್ಕಾರವು ಖೇಲ್ ರತ್ನ/ ಅರ್ಜುನ ಪ್ರಶಸ್ತಿ ವಿಜೇತ, ಅಂತರಾಷ್ಟ್ರೀಯ ಕ್ರೀಡಾಪಟು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಪರಿಶೀಲನಾ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರತೇರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಖೇಲ್ರತ್ನ/ದ್ರೋಣಾಚಾರ್ಯ/ಅರ್ಜುನ ಪ್ರಶಸ್ತಿ ವಿಜೇತ, ಅಂತರಾಷ್ಟ್ರೀಯ ಕ್ರೀಡಾಪಟು | ಅಧ್ಯಕ್ಷರು |
| 2 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಉಪಾಧ್ಯಕ್ಷರು |
| 3 | ಅರ್ಜುನ ಪ್ರಶಸ್ತಿ ವಿಜೇತ, ಅಂತರಾಷ್ಟ್ರೀಯ ಕ್ರೀಡಾಪಟು | ಸದಸ್ಯರು |
| 4 | ಅಧ್ಯಕ್ಷರು, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ | ಸದಸ್ಯರು |
| 5 | ಅಧ್ಯಕ್ಷರು, ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ | ಸದಸ್ಯರು |
| 6 | ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 7 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,ಬೆಂಗಳೂರು | ಸದಸ್ಯ ಕಾರ್ಯದರ್ಶಿಗಳು |

2. ಆಯಾ ಕ್ರೀಡೆಗಳಿಗೆ ಸಂಬಂಧಿಸಿದ ನಿವೃತ್ತ/ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತ ತರಬೇತುದಾರರು/ ಇಬ್ಬರು ನಿವೃತ್ತ / ಹಿರಿಯ ಕ್ರೀಡಾಪಟುಗಳನ್ನು ಪರಿಶೀಲನಾ ಸಮಿತಿ ಸಮಯದಲ್ಲಿ ಅಗತ್ಯತೆ ಕಂಡುಬಂದಾಗ ಆಹ್ವಾನಿಸಿ ಸಲಹೆ ಪಡೆಯಬಹುದು. ಈ ಆಹ್ವಾನಿತರ ನೇಮಕವನ್ನು ನಿರ್ದೇಶಕರು / ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು, ಈ ಆಹ್ವಾನಿತರು ನೀಡುವ ಸಲಹೆಯನ್ನು ದಾಖಲಿಸತಕ್ಕದ್ದು.ಆದರೆ ಅಂತಿಮ ನಿರ್ಧಾರ ಪರಿಶೀಲನಾ ಸಮಿತಿಯ ಸದಸ್ಯರದ್ದೇ ಆಗಿರತಕ್ಕದ್ದು.

27. ಏಕಲವ್ಯ ಪ್ರಶಸ್ತಿಯ ಆಯ್ಕೆಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿ ರಚಿಸತಕ್ಕದ್ದು. ಈ ಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| ಕ್ರ.ಸಂ. | ವಿವರ | ಪದನಾಮ |
|---|---|---|
| 1 | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು | ಅಧ್ಯಕ್ಷರು |
| 2 | ಖೇಲ್ ರತ್ನ/ದ್ರೋಣಾಚಾರ್ಯ/ಅರ್ಜುನ ಪ್ರಶಸ್ತಿ ವಿಜೇತ, ಅಂತರಾಷ್ಟ್ರೀಯ ಕ್ರೀಡಾಪಟು | ಉಪಾಧ್ಯಕ್ಷರು |
| 3 | ಅರ್ಜುನ ಪ್ರಶಸ್ತಿ ವಿಜೇತ, ಅಂತರಾಷ್ಟ್ರೀಯ ಕ್ರೀಡಾಪಟು | ಸದಸ್ಯರು |
| 4 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು | ಸದಸ್ಯರು |
| 5 | ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರತಿನಿಧಿ | ಸದಸ್ಯರು |
| 6 | ಅಧ್ಯಕ್ಷರು, ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ | ಸದಸ್ಯರು |
| 7 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿಗಳು |

ಜಯಶ್ರೀ ಎಸ್.ಎನ್.

**(ಜಯಶ್ರೀ ಎಸ್.ಎನ್)**

ಸರ್ಕಾರದ ಉಪ ಕಾರ್ಯದರ್ಶಿ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

7/11/23

## ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/170/2022; ದಿನಾಂಕ:07.11.2023ರ

## ಅನುಬಂಧ-2

## ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾಗುವ ಕ್ರೀಡೆಗಳ ವಿವರ

| Sl No | Olympic Games | Commonwealth Games | Asian Games | Other Games |
|---|---|---|---|---|
| 1. | Archery | Archery | Archery | Kho Kho |
| 2. | Athletics | Athletics | Athletics | Atya-Patya |
| 3. | Badminton | Badminton | Badminton | Ball Badminton |
| 4. | Basketball | Basketball | Basketball | Body Building |
| 5. | Beach volleyball | Beach volleyball | Beach volleyball | Carom |
| 6. | Boxing | Boxing | Boxing | Cycle Polo |
| 7. | Canoe slalom, canoe sprint | Canoe | Canoe (slalom, canoe sprint, Traditional boat race) | Jump Rope |
| 8. | Cycling( bmx, road, track, mountain bike) | Cycling(road, track, mountain bike) | Cycling( bmx, road, track, mountain bike) | Power Lifting |
| 9. | Diving | Diving | Diving | Roll Ball |
| 10. | Equestrian(dressage, eventing, jumping) | - | Equestrian(dressage, eventing, jumping) | Shooting Ball |
| 11. | Fencing | Fencing | Fencing | Tenni-Koit |
| 12. | Football | - | Football | Tennis Ball cricket |
| 13. | Golf | - | Golf | Tug-Of-War |
| 14. | Gymnastics (artistic, rhythmic) | Gymnastics (artistic, rhythmic) | Gymnastics(artistic, rhythmic) | Winter Games |
| 15. | Handball | - | Handball | Deaf Sports |
| 16. | Hockey | Hockey | Hockey | Motor Sports |
| 17. | Judo | Judo | Judo | |
| 18. | Modern pentathlon | - | Modern pentathlon | |
| 19. | Rowing | Rowing | Rowing | |
| 20. | Rugby | Rugby | Rugby | |
| 21. | Sailing | Sailing | Sailing | |
| 22. | Shooting | Shooting | Shooting | |
| 23. | Swimming, synchronized swimming | Swimming, synchronized swimming | Swimming, synchronized swimming | |
| 24. | Table tennis | Table tennis | Table tennis | |
| 25. | Taekwondo | Taekwondo | Taekwondo | |
| 26. | Tennis | Tennis | Tennis, Soft tennis | |
| 27. | Trampoline | - | Trampoline | |
| 28. | Triathlon | Triathlon | Triathlon | |
| 29. | Volleyball | - | Volleyball | |
| 30. | Water polo | Water polo | Water polo | |
| 31. | Weightlifting | Weightlifting | Weightlifting | |
| 32. | Wrestling(freestyle, greco-roman) | Wrestling(freestyle, greco-roman) | Wrestling(freestyle, greco-roman) | |
| 33. | | Cricket | Baseball | |
| 34. | | Lawn Bowls | Softball | |
| 35. | | Netball | Bowling | |
| 36. | | Softball | Bridge | |
| 37. | | Squash | Jet ski | |
| 38. | | Tenpin Bowling | Kabaddi | |
| 39. | | | Karate | |
| 40. | | | Martial arts(jujitsu, kurash, pencak | |

| | | | | |
|---|---|---|---|---|
| | | | silat, sambo, wushu) | |
| 41. | | | Paragliding | |
| 42. | | | Roller sports(roller skating, skateboarding) | |
| 43. | | | Sepaktakraw | |
| 44. | | | Sports climbing | |
| 45. | | | Squash | |

**ಸೂಚನೆ: ಪ್ರಸಕ್ತ ಸಾಲಿನ Olympic/Commonwealth/Asian Games/Other Games ಹಾಗೂ National Games ನಲ್ಲಿ ಸಂಘಟಿಸಲಾಗುವ ಕ್ರೀಡೆಗಳನ್ನು ಪರಿಗಣಿಸಲಾಗುವುದು.**

(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/170/2022; ದಿನಾಂಕ:07.11.2023ರ**

**ಅನುಬಂಧ-3**

**ಏಕಲವ್ಯ ಪ್ರಶಸ್ತಿಗೆ ಪರಿಗಣಿಸಲಾಗುವ ಪ್ರತಿ ಕ್ರೀಡಾ ಸಾಧನೆಯ ಅಂಕಪಟ್ಟಿ**

| Sl. No | SportsDistinction/Participation | CertificateIssuingAuthority | Weightage Marks |
|---|---|---|---|
| 1 | Gold Medal in Olympics/Paralympics | International Olympic Committee (IOC)/ International Paralympic Committee (IPC) | 100 |
| 2 | Silver Medal in Olympics/ Paralympics | International Olympic Committee (IOC)/ International Paralympic Committee (IPC) | 99 |
| 3 | Bronze Medal in Olympics/ Paralympics | International Olympic Committee (IOC)/ International Paralympic Committee (IPC) | 98 |
| 4 | Participation in Olympics/ Paralympics | International Olympic Committee (IOC)/ International Paralympic Committee (IPC) | 97 |
| 5 | Gold Medal in World Cup/Para World Cup | International Sports Federation/ National Sports Federations | 96 |
| 6 | Silver Medal in World Cup/Para World Cup | International Sports Federation/ National Sports Federations | 95 |
| 7 | Bronze Medal in World Cup/Para World Cup | International Sports Federation/ Sports Federations | 94 |
| 8 | Participation in World Cup/Para World Cup | International Sports Federation/ Sports Federations | 93 |
| 9 | Gold Medal in World Championship/Para World Championships (Olympic/Asian/Commonwealth Games Sports disciplines only) | International Sports Federation / National sports Federation | 92 |
| 10 | Silver Medal in World Championship/Para World Championships ((Olympic/Asian/Commonwealth Games Sports disciplines only) | International Sports Federation / National sports Federation | 91 |
| 11 | Bronze Medal in World Championship/Para World Championships (Olympic/Asian/Common Wealth Games Sports disciplines only) | International Sports Federation / National sports Federation | 90 |
| 12 | Participation in World Championship/Para World Championships (Olympic/Asian/Commonwealth Games Sports disciplines only) | International Sports Federation / National sports Federation | 89 |
| 13 | Gold Medal in Asian Games/ Para Asian Games | Recognised by IOC and Olympic Council of Asia | 88 |
| 14 | Silver Medal in Asian Games / Para Asian Games | Recognised by IOC and Olympic Council of Asia | 87 |
| 15 | Bronze Medal in Asian Games / Para Asian Games | Recognised by IOC and Olympic Council of Asia | 86 |
| 16 | Participation in Asian Games / Para Asian Games | Recognised by IOC and Olympic Council of Asia | 85 |
| 17 | Gold Medal in Commonwealth Games / Para Commonwealth Games | Recognised by IOC and Common Wealth Games Federation | 84 |
| 18 | Silver Medal in Commonwealth Games / Para Commonwealth Games | Recognised by IOC and Common Wealth Games Federation | 83 |
| 19 | Bronze Medal in Commonwealth Games / Para Commonwealth Games | Recognised by IOC and Common Wealth Games Federation | 82 |
| 20 | Participation in Commonwealth Games / Para Commonwealth Games | Recognised by IOC and Common Wealth Games Federation | 81 |

| | | | |
|---|---|---|---|
| 21 | Gold Medal in Asian Championships (Olympic/Asian/Commonwealth Games Sports disciplines only) | Recognised by Continental Confederation/International Sports Federation | 80 |
| 22 | Silver Medal in Asian Championships (Olympic/Asian/Commonwealth Games disciplines only) | Recognised by Continental Confederation/International Sports Federation | 79 |
| 23 | Bronze Medal in in Asian Championships (Olympic/Asian/Commonwealth Games disciplines only) | Recognised by Continental Confederation/International Sports Federation | 78 |
| 24 | Participation in Asian Championships (Olympic/Asian/Commonwealth Games disciplines only) | Recognised by Continental Confederation/International Sports Federation | 77 |
| 25 | Gold Medal in Commonwealth Championship | Common Wealth Games Federation/Continental Confederation | 76 |
| 26 | Silver Medal in Commonwealth Championship | Common Wealth Games Federation/Continental Confederation | 75 |
| 27 | Bronze Medal Commonwealth Championship | Common Wealth Games Federation/Continental Confederation | 74 |
| 28 | Participation in Commonwealth Championship | Common Wealth Games Federation/Continental Confederation | 73 |
| 29 | Gold Medal in Youth Olympics | International Olympic Committee/National Olympic Committee | 72 |
| 30 | Silver Medal in Youth Olympics | International Olympic Committee/National Olympic Committee | 71 |
| 31 | Bronze Medal in Youth Olympics | International Olympic Committee/National Olympic Committee | 70 |
| 32 | Participation in Youth Olympics | International Olympic Committee/National Olympic Committee | 69 |
| 33 | Gold Medal in Junior/Youth World Cup | International Sports Federation/ National Sports Federations | 68 |
| 34 | Silver Medal in Junior/Youth World Cup | International Sports Federation/ National Sports Federations | 67 |
| 35 | Bronze Medal in Junior/Youth World Cup | International Sports Federation/ National Sports Federations | 66 |
| 36 | Participation in Junior/Youth World Cup | International Sports Federation/ National Sports Federations | 65 |
| 37 | Gold Medal in Sub Junior/Junior/Cadet/Youth World Championship | International Sports Federation/ National Sports Federations | 64 |
| 38 | Silver Medal in Sub Junior/Junior/Cadet/Youth World Championship | International Sports Federation/ National Sports Federations | 63 |
| 39 | Bronze Medal in Sub Junior/Junior/Cadet/Youth World Championship | International Sports Federation/ National Sports Federations | 62 |
| 40 | Participation in Sub Junior /Junior/Cadet/Youth World Championship | International Sports Federation/ National Sports Federations | 61 |
| 41 | Gold Medal in Sub Junior/ Cadet/ Junior/Youth Asian Games/ Para Asian Games | Recognised by IOC and Olympic Council of Asia | 60 |

| | | | |
|---|---|---|---|
| 42 | Silver Medal in Sub Junior/ Cadet/ Junior/Youth Asian Games/ Para Asian Games | Recognised by IOC and Olympic Council of Asia | 59 |
| 43 | Bronze Medal in Sub Junior/ Cadet/ Junior/Youth Asian Games/ Para Asian Games | Recognised by IOC and Olympic Council of Asia | 58 |
| 44 | Participation in Sub Junior/ Cadet/ Junior/Youth Asian Games/ Para Asian Games | Recognised by IOC and Olympic Council of Asia | 57 |
| 45 | Gold Medal in Junior/ Youth Commonwealth Games / Para Commonwealth Games | Common Wealth Games Federation/Continental Confederation | 56 |
| 46 | Silver Medal in Junior/ Youth Commonwealth Games / Para Commonwealth Games | Common Wealth Games Federation/Continental Confederation | 55 |
| 47 | Bronze Medal in Junior/ Youth Commonwealth Games / Para Commonwealth Games | Common Wealth Games Federation/Continental Confederation | 54 |
| 48 | Participation in Junior/ Youth Commonwealth Games / Para Commonwealth Games | Common Wealth Games Federation/Continental Confederation | 53 |
| 49 | Gold Medal in Sub Junior/ Cadet/ Junior/Youth Asian Championships (Asian Games disciplines only) | International Sports Federations and Continental Confederation | 52 |
| 50 | Silver Medal in Sub Junior/ Cadet/ Junior/Youth Asian Championships (Asian Games disciplines only) | International Sports Federations and Continental Confederation | 51 |
| 51 | Bronze Medal in Sub Junior/ Cadet Junior/Youth Asian Championships (Asian Games disciplines only) | International Sports Federations and Continental Confederation | 50 |
| 52 | Participation in Sub Junior/ Cadet/ Junior/Youth Asian Championships (Asian Games disciplines only) | International Sports Federations and Continental Confederation | 49 |
| 53 | Gold Medal in Junior/ Youth Commonwealth Championship | Common Wealth Games Federation/Continental Confederation | 48 |
| 54 | Silver Medal in Junior/ Youth Commonwealth Championship | Common Wealth Games Federation/Continental Confederation | 47 |
| 55 | Bronze Medal in Junior/ Youth Commonwealth Championship | Common Wealth Games Federation/Continental Confederation | 46 |
| 56 | Participation in Junior/ Youth Commonwealth Championship | Common Wealth Games Federation/Continental Confederation | 45 |
| 57 | Gold Medal in Grand Slam/Grand Master / Grand prix | International Sports Federation/ILTF/FIDE/Federation Nationale' De Automobile | 44 |
| 58 | Silver Medal in Grand Slam/Grand Master / Grand prix | International Sports Federation/ILTF/FIDE/Federation Nationale' De Automobile | 43 |
| 59 | Bronze Medal in Grand Slam/Grand Master / Grand prix | International Sports Federation/ILTF/FIDE/Federation Nationale' De Automobile | 42 |

| | | | |
|---|---|---|---|
| 60 | Participation in Grand Slam/Grand Master / Grand prix | International Sports Federation/ILTF/FIDE/Federation Nationale' De Automobile | 41 |
| 61 | Gold Medal in AFRO- Asian Games | Olympic Council of Asia & Olympic Council of Africa | 40 |
| 62 | Silver Medal in AFRO- Asian Games | Olympic Council of Asia & Olympic Council of Africa | 39 |
| 63 | Bronze Medal in AFRO- Asian Games | Olympic Council of Asia & Olympic Council of Africa | 38 |
| 64 | Participation in AFRO- Asian Games | Olympic Council of Asia & Olympic Council of Africa | 37 |
| 65 | Gold Medal in S.A.F. Games | South Asian Olympic Council | 36 |
| 66 | Silver Medal in S.A.F. Games | South Asian Olympic Council | 35 |
| 67 | Bronze Medal in S.A.F. Games | South Asian Olympic Council | 34 |
| 68 | Participation in S.A.F. Games | South Asian Olympic Council | 33 |
| 69 | Gold Medal in the Official International Meet/ Championship being part of National Team officially sponsored by MYA & S, Government of India | International Sports Federation/ National Sports Federations | 32 |
| 70 | Silver Medal in the Official International Meet/ Championship being part of National Team officially sponsored by MYA & S, Government of India | International Sports Federation/ National Sports Federations | 31 |
| 71 | Bronze Medal in the Official International Meet/ Championship being part of National Team officially sponsored by MYA & S, Government of India | International Sports Federation/ National Sports Federations | 30 |
| 72 | Participation in the Official International Meet/ Championship being part of National Team officially sponsored by MYA & S, Government of India | InternationalSportsFederation/ National Sports Federations | 29 |
| 73 | Gold Medal in National Games | Indian Olympic Association / National Sports Federation Recognised by (MYA & S) | 28 |
| 74 | Silver Medal in National Games | Indian Olympic Association / National Sports Federation Recognised by (MYA & S) | 27 |
| 75 | Bronze Medal in National Games | Indian Olympic Association / National Sports Federation Recognised by (MYA & S) | 26 |
| 76 | Gold Medal in Senior National Championship (Olympic/Asian/Common Wealth/National Games Disciplines only) | National Sports Federation Recognised by MYAS | 25 |
| 77 | Silver Medal in Senior National Championship (Olympic/Asian/Common Wealth/National Games Disciplines only) | National Sports Federation Recognised by MYAS | 24 |
| 78 | Bronze Medal in Senior National Championship (Olympic/Asian/Common Wealth/National Games Disciplines only) | National Sports Federation Recognised by MYAS | 23 |
| 79 | Gold Medal in All India Inter University/Khelo India University Games | National Sports Federation Recognised by MYAS | 22 |
| 80 | Silver Medal in All India Inter University/Khelo India University Games | National Sports Federation Recognised by MYAS | 21 |
| 81 | Bronze Medal in All India Inter University/Khelo India University Games | National Sports Federation Recognised by MYAS | 20 |
| 82 | Participation in National Games | Indian Olympic Association / National Sports Federation Recognised by (MYA & S) | 19 |

| | | | |
|---|---|---|---|
| 83 | Participation in Senior National Championship (Olympic/Asian/Common Wealth/National Games Disciplines only) | National Sports Federation Recognised by MYA&S | 18 |
| 84 | Participation in All India Inter University/Khelo India University Games | National Sports Federation Recognised by MYAS | 17 |
| 85 | Gold Medal in Junior/ Cadet/ Sub Junior National Championship | National Sports Federation Recognised by MYA & S | 16 |
| 86 | Silver Medal in Junior/ Cadet/ Sub Junior National Championship | National Sports Federation Recognised by MYA&S | 15 |
| 87 | Bronze Medal in Junior/ Cadet/ Sub Junior National Championship | National Sports Federation Recognised by MYA&S | 14 |
| 88 | Participation in Junior/ Cadet/ Sub Junior National Championship | National Sports Federation Recognised by MYA&S | 13 |
| 89 | Gold Medal in Khelo India Games/School Games | Government of India/ SAI / National Sports Federation | 12 |
| 90 | Silver Medal in Khelo India Games/School Games | Government of India/ SAI / National Sports Federation | 11 |
| 91 | Bronze Medal in Khelo India Games/School Games | Government of India/ SAI / National Sports Federation | 10 |
| 92 | Participation in Khelo India Games/School Games | Government of India/ SAI / National Sports Federation | 09 |
| 93 | Gold Medal in Senior Sports and Games which are not part of Olympic/Asian/Common Wealth Games Sports disciplines and corresponding Para Sports | National Sports Federation of concerned discipline | 08 |
| 94 | Silver Medal in Senior Sports and Games which are not part of Olympic/Asian/Common Wealth Games Sports disciplines and corresponding Para Sports | National Sports Federation of concerned discipline | 07 |
| 95 | Bronze Medal in Senior Sports and Games which are not part of Olympic/Asian/Common Wealth Games Sports disciplines and corresponding Para Sports. | National Sports Federation of concerned discipline | 06 |
| 96 | Participation in Senior Sports and Games which are not part of Olympic/Asian/Common Wealth Games Sports disciplines and corresponding Para Sports. | National Sports Federation of concerned discipline | 05 |
| 97 | Gold Medal in Junior and Sub Junior Sports and Games which are not part of Olympic/Asian/Commonwealth Games Sports disciplines and corresponding Para Sports. | National Sports Federation of concerned discipline | 04 |
| 98 | Silver Medal in Junior and Sub Junior Sports and Games which are not part of Olympic/Asian/Commonwealth Games Sports disciplines and corresponding Para Sports. | National Sports Federation of concerned discipline | 03 |
| 99 | Bronze Medal in Junior and Sub Junior Sports and Games which are not part of Olympic/Asian/Commonwealth Games Sports disciplines and corresponding Para Sports. | National Sports Federation of concerned discipline | 02 |
| 100 | Participation in Junior and Sub Junior Sports and Games which are not part of Olympic/Asian/Commonwealth Games Sports disciplines and corresponding Para Sports. | National Sports Federation of concerned discipline | 01 |

(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.